# HIGH COURT OF KARNATAKA
ಕರ್ನಾಟಕ ಉಚ್ಚ ನ್ಯಾಯಾಲಯ

## MAIN WRITTEN EXAMINATION FOR RECRUITMENT TO THE POSTS OF DISTRICT JUDGES
ಜಿಲ್ಲಾ ನ್ಯಾಯಾಧೀಶರುಗಳ ಹುದ್ದೆಗಳ ನೇಮಕಾತಿಯ ಮುಖ್ಯ ಲಿಖಿತ ಪರೀಕ್ಷೆ

## CIVIL LAW
ದಿವಾಣಿ ಕಾನೂನು

## QUESTION PAPER
ಪ್ರಶ್ನೆ ಪತ್ರಿಕೆ

**Date: 15.02.2020** **Max. Marks: 150**
ದಿನಾಂಕ: 15.02.2020 ಗರಿಷ್ಠ ಅಂಕಗಳು: 150

**TIME: 02-30 pm to 05.30 pm**
ಸಮಯ: ಮಧ್ಯಾಹ್ನ 02.30 ರಿಂದ 05.30 ಘಂಟೆ

**INSTRUCTIONS TO THE CANDIDATES:**
ಅಭ್ಯರ್ಥಿಗಳಿಗೆ ಸೂಚನೆಗಳು:

1) *The candidates should note Rule 5(b) of the Karnataka Judicial Service (Recruitment) (Amendment) Rules, 2016 that reads as under:*

*Main Examination:*
*The Competitive Written Examination for recruitment of District Judges shall consist of:-*

(i) *Written Examination of two papers each of three hours duration with 150 maximum marks of each paper-one in Civil Law and another in Criminal Law.*

(ii) *It is compulsory for all candidates to answer at least one of the paper in English language and in so far as the other paper is concerned, it shall be optional for the candidates to answer the same either in English or in Kannada in which event the said paper shall be answered entirely in the language in which option is exercised.*

1) ಕರ್ನಾಟಕ ನ್ಯಾಯಿಕ ಸೇವಾ (ನೇಮಕಾತಿ) (ತಿದ್ದುಪಡಿ) ನಿಯಮಗಳು 2016ರ ನಿಯಮ 5(ಬಿ)ಯನ್ನು ಈ ಕೆಳಗಿನಂತೆ ಓದಲಾಗುವುದು ಎಂದು ಅಭ್ಯರ್ಥಿಗಳು ಗಮನಿಸತಕ್ಕದ್ದು:

ಮುಖ್ಯ ಪರೀಕ್ಷೆ:
ಜಿಲ್ಲಾ ನ್ಯಾಯಾಧೀಶರ ನೇಮಕಾತಿಯಲ್ಲಿ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯು ಒಳಗೊಂಡಿದ್ದು:-

(i) ಲಿಖಿತ ಪರೀಕ್ಷೆಯು ಎರಡು ಪತ್ರಿಕೆಯದಾಗಿದ್ದು ತಲಾ ಮೂರು ಗಂಟೆ ಅವಧಿಯ ಪ್ರತಿ ಪತ್ರಿಕೆಯು 150 ಗರಿಷ್ಠ ಅಂಕಗಳು ಉಳ್ಳದ್ದು – ಒಂದು ದಿವಾಣಿ ಕಾನೂನು ಮತ್ತೊಂದು ಅಪರಾಧಿಕ ಕಾನೂನುದಾಗಿರುತ್ತದೆ.

(ii) ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಕನಿಷ್ಟ ಪಕ್ಷ ಒಂದು ಪತ್ರಿಕೆಯನ್ನು ಆಂಗ್ಲ ಭಾಷೆಯಲ್ಲಿ ಉತ್ತರಿಸಬೇಕಾಗುವುದು ಮತ್ತು ಮತ್ತೊಂದು ಪತ್ರಿಕೆಗೆ ಸಂಬಂಧಿಸಿದಂತೆ ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ, ಆ ಸಂದರ್ಭದಲ್ಲಿ ಆ ಪತ್ರಿಕೆಯನ್ನು ಪೂರ್ತಿ ಆಯ್ಕೆ ಮಾಡಿದ ಭಾಷೆಯಲ್ಲಿ ಉತ್ತರಿಸತಕ್ಕದ್ದು.

*2) If there is any difference in the question in English language and Kannada language, the question framed in English language shall prevail.*

ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.

*3). Write your register number only on the cover page in the space provided and nowhere else. You must not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.*

ನಿಮ್ಮ ರಿಜಿಸ್ಟರ್ ನಂಬರನ್ನು ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

**1. Write a judgment on the basis of following facts by assuming that you are the judge of a Court of First Appeal:** **25 Marks**

*Note: a) The facts should be presumed and stated in brief and not reproduced verbatim*

*b) It should be presumed that necessary witnesses have been examined and necessary and relevant documents have been produced to support the case.*

The plaintiff filed a suit praying for a decree for Specific Performance by directing the defendant to execute the registered sale deed in his favour.

The defendant has admitted the sale transaction, execution of an Agreement to sell and also receipt of the sale advance amount from the plaintiff. The only contention of the defendant is that the plaintiff is/was not ready to perform his part of the contract by paying the balance sale consideration amount in time. Therefore, plaintiff is not entitled for the decree for specific performance. Hence, the defendant prayed for dismissal of the suit with costs.

The trial Court framed the issues and after considering the oral and documentary evidence of both the parties, the trial court held that the plaintiffs readiness and willingness to perform his part of the contract was not proved and accordingly, partly decreed the suit for refund of the sale advance by directing the defendant to repay the sale advance amount to the plaintiff with interest at the rate of 10% P.A.

Being aggrieved by the said judgment, the defendant preferred an appeal and challenged the legality and correctness of the impugned judgment only on the ground that when the trial court held that that the plaintiff's readiness and willingness to perform his part of the contract was not proved, the trial court should have dismissed the suit. According to the Appellant/defendant, when the plaintiff has not specifically prayed

for the relief for refund of the sale advance as an alternative relief, the trial court could not have granted the same, as no court can grant a relief which is not prayed for. It was further contended by the appellant/defendant that even as per Sec.22(2) of the Specific Relief Act, 1963, if the relief for refund of earnest money is not claimed as an alternative relief, the Court shall not grant the same. On these grounds, appellant/defendant prayed to set aside the impugned judgment and to dismiss the suit of the plaintiff.

Where as, in justifying the impugned judgment, the respondent/plaintiff contended that though the plaintiff has not specifically claimed the relief for refund of sale advance amount as an alternative prayer, even then the trial Court is empowered to grant the same by invoking Order 7 Rule 7 of Code of Civil Procedure 1908, by moulding the relief, as the relief for refund of Sale advance is a lesser relief than the relief for Specific Performance.

**ಈ ಕೆಳಗಿನ ಸಂಗತಿಗಳ ಆಧಾರದ ಮೇಲೆ ನೀವು ಮೊದಲನೇ ಮೇಲ್ಮನವಿ ನ್ಯಾಯಾಲಯದ ನ್ಯಾಯಾಧೀಶರು ಎಂದು ಭಾವಿಸಿ ತೀರ್ಪು ಬರೆಯಿರಿ:** **25 ಅಂಕಗಳು**

**ಸೂಚನೆ:** *ಎ) ಸಂಗತಿಗಳನ್ನು ಭಾವಿಸಿ ಸಂಕ್ಷಿಪ್ತವಾಗಿ ಹೇಳತಕ್ಕದ್ದು ಮತ್ತು ಶಬ್ದಶಃ ಪುನರುತ್ಪಾದನೆ ಮಾಡಬಾರದು*

*ಬಿ) ಪ್ರಕರಣವನ್ನು ಸಮರ್ಥಿಸುವ ಎಲ್ಲಾ ಅಗತ್ಯ ಸಾಕ್ಷಿಗಳನ್ನು ವಿಚಾರಣೆ ಮಾಡಿದ್ದಾರೆಂದು ಮತ್ತು ಅಗತ್ಯ ಮತ್ತು ಸುಸಂಬದ್ಧ ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆಂದು ಭಾವಿಸತಕ್ಕದ್ದು.*

ವಾದಿಯು ಖರೀದಿ ಕರಾರು ಪತ್ರದ ಆಧಾರದ ಮೇಲೆ ನೋಂದಾಯಿತ ಖರೀದಿ ಪತ್ರವನ್ನು ಬರೆದುಕೊಡಲು ಪ್ರತಿವಾದಿಗೆ ನಿರ್ದೇಶನ ಕೋರಿ ಡಿಕ್ರಿ ಮಾಡಬೇಕು ಎಂದು ವಿನಂತಿಸಿ ನಿರ್ದಿಷ್ಟ ಪಾಲನಾ ದಾವೆಯನ್ನು ಸಲ್ಲಿಸಿದ್ದರು.

ಪ್ರತಿವಾದಿಯು ಖರೀದಿ ವ್ಯವಹಾರ ಆಗಿರುವುದನ್ನು, ಖರೀದಿ ಕರಾರು ಪತ್ರ ಬರೆದುಕೊಟ್ಟಿರುವುದನ್ನು ಮತ್ತು ವಾದಿಯಿಂದ ತಾನು ಮುಂಗಡ ಹಣ ಸ್ವೀಕರಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. ಪ್ರತಿವಾದಿಯ ಏಕೈಕ ವಿವಾದವೆಂದರೆ ವಾದಿಯು ಬಾಕಿ ಉಳಿದ ಖರೀದಿ ಹಣವನ್ನು ನಿಗದಿತ ಸಮಯದೊಳಗೆ ಕೊಟ್ಟು ಒಪ್ಪಂದದ ತನ್ನ ಪಾಲಿನ ಭಾಗವನ್ನು ನಿರ್ವಹಿಸಲು ಸಿದ್ಧನಿರಲಿಲ್ಲ. ಆದುದರಿಂದ ವಾದಿಯು ನಿರ್ದಿಷ್ಟ ಪಾಲನಾ ಡಿಕ್ರಿಗೆ ಅರ್ಹನಾಗಿಲ್ಲ. ಈ ಕಾರಣದಿಂದ ಪ್ರತಿವಾದಿಯು ದಾವಾವನ್ನು ಖರ್ಚುಸಹಿತ ವಜಾ ಮಾಡಲು ಕೋರಿದ್ದರು.

ವಿಚಾರಣಾ ನ್ಯಾಯಾಲಯವು ವಿವಾದಾಂಶಗಳನ್ನು ರೂಪಿಸಿ ಉಭಯ ಪಕ್ಷಗಾರರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಪರಿಗಣಿಸಿ ವಾದಿಯು ಒಪ್ಪಂದದ ತನ್ನ ಪಾಲಿನ ಭಾಗವನ್ನು ನಿರ್ವಹಿಸಲು ಸಿದ್ಧನಿರುವುದನ್ನು ರುಜುವಾತು ಪಡಿಸಿಲ್ಲ ಎಂದು ತೀರ್ಮಾನಿಸಿ ವಾದಿಗೆ ಮುಂಗಡ ಖರೀದಿ ಹಣವನ್ನು ಶೇಕಡ 10 ವಾರ್ಷಿಕ ಬಡ್ಡಿಯಂತೆ ಪ್ರತಿವಾದಿಗೆ ಮರುಪಾವತಿ ಮಾಡಲು ನಿರ್ದೇಶನ ನೀಡಿ ದಾವಾವನ್ನು ಭಾಗಶಃ ಡಿಕ್ರಿ ಮಾಡಿತ್ತು.

ಪ್ರತಿವಾದಿಯು ಆ ತೀರ್ಪಿನ ಕಾನೂನುಬದ್ಧತೆ ಮತ್ತು ಸರಿಯಾದತೆಯನ್ನು ಒಂದೇ ಒಂದು ಕಾರಣದಿಂದ ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿದ್ದು ಪ್ರತಿವಾದಿಯ ಪ್ರಕಾರ ವಾದಿಯು ಒಪ್ಪಂದದ ತನ್ನ ಪಾಲಿನ ಭಾಗವನ್ನು ನಿರ್ವಹಿಸಲು ಸಿದ್ಧನಿರುವುದನ್ನು ರುಜುವಾತು ಪಡಿಸಿಲ್ಲ ಎಂದು ವಿಚಾರಣಾ ನ್ಯಾಯಾಲಯವು ತೀರ್ಮಾನಿಸಿದಾಗ ದಾವಾವನ್ನು ವಜಾ ಮಾಡಬೇಕಾಗಿತ್ತು ಎನ್ನುತ್ತಾರೆ. ಮೇಲ್ಮನವಿದಾರ/ಪ್ರತಿವಾದಿಯ ಪ್ರಕಾರ ವಾದಿಯು ಮುಂಗಡ ಖರೀದಿ ಹಣವನ್ನು ಮರುಪಾವತಿ ಮಾಡುವಂತೆ ಪರ್ಯಾಯ ಪರಿಹಾರವನ್ನು ನಿರ್ದಿಷ್ಟವಾಗಿ ಕೇಳದೆ ಇದ್ದಾಗ ವಿಚಾರಣಾ ನ್ಯಾಯಾಲಯವು ಆ ಪರಿಹಾರವನ್ನು ವಾದಿಗೆ ನೀಡಬಾರದಾಗಿತ್ತು ಯಾಕೆಂದರೆ ಯಾವುದೇ ನ್ಯಾಯಾಲಯವು ಕೇಳದೇ ಇರುವ ಪರಿಹಾರವನ್ನು ಕೊಡಲು ಆಗುವುದಿಲ್ಲ ಎನ್ನುತ್ತಾರೆ. ಮೇಲ್ಮನವಿದಾರ/ಪ್ರತಿವಾದಿ ಪ್ರಕಾರ ನಿರ್ದಿಷ್ಟ ಪರಿಹಾರ ಕಾಯಿದೆ, 1963ರ ಕಲಂ 22(2)ರ ಪ್ರಕಾರ ಮುಂಗಡ ಖರೀದಿ ಹಣವನ್ನು ವಾಪಸ್ಸು ಪಡೆಯುವ ಪರಿಹಾರವನ್ನು ಪರ್ಯಾಯವಾಗಿ ಕೇಳದೇ ಇದ್ದಾಗ ನ್ಯಾಯಾಲಯವು ಅದನ್ನು ನೀಡಲು ಆಗುವುದಿಲ್ಲ ಎಂಬುದಾಗಿದೆ. ಈ ಎಲ್ಲಾ ಕಾರಣಗಳಿಂದ ಮೇಲ್ಮನವಿದಾರ/ಪ್ರತಿವಾದಿಯು ವಿವಾದಿತ ತೀರ್ಪನ್ನು ರದ್ದುಗೊಳಿಸಿ ವಾದಿಯ ದಾವಾವನ್ನು ವಜಾ ಮಾಡಲು ವಿನಂತಿಸಿಕೊಂಡಿದ್ದಾರೆ.

ಆದರೆ ಎದುರುದಾರ/ವಾದಿಯು ವಿವಾದಿತ ತೀರ್ಪನ್ನು ಸಮರ್ಥಿಸಿಕೊಳ್ಳುತ್ತ ವಾದಿಯು ಖರೀದಿ ಮುಂಗಡ ಹಣವನ್ನು ವಾಪಸ್ಸು ಕೊಡುವ ಪರಿಹಾರವನ್ನು ಪರ್ಯಾಯವಾಗಿ ನಿರ್ದಿಷ್ಟವಾಗಿ ಕೇಳದೇ

ಇದ್ದರೂ ಕೂಡ ನ್ಯಾಯಾಲಯವು ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಆದೇಶ 7 ನಿಯಮ 7ನ್ನು ಉಲ್ಲೇಖಿಸಿ ಪರಿಹಾರವನ್ನು ರೂಪಿಸಿ ಕೊಡುವ ಅಧಿಕಾರವನ್ನು ಹೊಂದಿದ್ದು ನಿರ್ದಿಷ್ಟ ಪಾಲನಾ ಪರಿಹಾರಕ್ಕಿಂತ ಮುಂಗಡ ಹಣ ಮರುಪಾವತಿಯ ಪರಿಹಾರ ಕಡಿಮೆ ಪರಿಹಾರ ಎಂದು ಸಾಧಿಸಿದ್ದಾರೆ.

**2. Frame proper issues on the basis of the following pleadings.** **15 Marks**

The plaintiff is the daughter of defendant No.1 and elder sister of defendant No.2 and 3. The defendant No.4 is the purchaser of the suit item No.4 and 5 properties. The suit properties are the ancestral and joint family properties of the plaintiff and defendant Nos.1 to 3. The plaintiff has got 1/4th share over the suit properties. The defendant No.1 to 3, without the knowledge of the plaintiff, have effected partition of the suit property between themselves, which is not binding on the plaintiff. Subsequent to the partition, the defendant No.1 has sold the suit item No.4 and 5 in favour of the defendant No.4, which is also not binding on the plaintiff.

On all these grounds, plaintiff claimed a decree to declare that the partition effected on 04.04.2015 between defendant No.1 to 3 through the registered partition deed and sale deed dated 17.07.2015 executed by defendant No.1 in favour of defendant No.4 in respect of suit item No.4 and 5 are null and void and not binding on the plaintiff and to pass a decree for partition and separate possession of the plaintiff's 1/4th share over the suit properties and also for mesne profits.

The defendant No.1 to 3 were placed exparte. The defendant No.4 filed the written statement and denied the relationship of the

plaintiff with defendant No.1 to 3 and other plaint averments. According to the defendant No.4 the suit properties are the joint family properties of the defendant No.1 to 3 and through a registered partition deed dated 04.04.2015, they have partitioned the suit properties between them, in which suit item No.4 and 5 have fallen to the share of the defendant No.1. The defendant No.1, for his legal necessities, sold the suit item No.4 and 5 in favour of the defendant No.4 vide registered sale deed dated 17.07.2015. The defendant No.4 is the bonafide purchaser of suit item No.4 and 5 for valuable consideration. The defendant No.4, after purchase, has invested huge amounts and has converted the purchased land into a non agricultural land. Even if the plaintiff has got any share, her share has to be allotted in suit item No.1 to 3. There are other joint family properties belonged to the family of defendant No.1 to 3, which were not included in this suit. The suit is bad for non-joinder of necessary parties. The suit is not properly valued and the requisite court fee is not paid on the plaint. This court has no jurisdiction to try the suit. The suit is barred by Limitation. On these grounds, defendant No.4 prayed for dismissal of the suit with costs.

**ಈ ಕೆಳಗಿನ ವಾದ ಮತ್ತು ಪ್ರತಿವಾದ ಪತ್ರಗಳ ಆಧಾರದ ಮೇಲೆ ವಿವಾದಾಂಶಗಳನ್ನು ರೂಪಿಸಿರಿ:** **15 ಅಂಕಗಳು**

ವಾದಿಯು 1ನೇ ಪ್ರತಿವಾದಿಯ ಮಗಳಾಗಿದ್ದು 2 ಮತ್ತು 3ನೇ ಪ್ರತಿವಾದಿಯ ಹಿರಿಯ ಸಹೋದರಿ ಆಗಿರುತ್ತಾಳೆ. 4ನೇ ಪ್ರತಿವಾದಿಯು ದಾವಾ ಐಟಂ ನಂ.4 ಮತ್ತು 5ರ ಖರೀದಿದಾರನಾಗಿರುತ್ತಾನೆ. ದಾವಾ ಸ್ವತ್ತು ವಾದಿ ಮತ್ತು ಪ್ರತಿವಾದಿ 1 ರಿಂದ 3 ಇವರ ಒಟ್ಟು ಕುಟುಂಬದ ಮತ್ತು ಪೂರ್ವಜರ ಆಸ್ತಿಯಾಗಿರುತ್ತದೆ. ವಾದಿಗೆ ದಾವಾ ಆಸ್ತಿಯ ಮೇಲ್ಠೆ 1/4ನೇ ಹಿಸ್ಸೆ ಇರುತ್ತದೆ. 1 ರಿಂದ 3ನೇ

ಪ್ರತಿವಾದಿಯರು ವಾದಿಯ ಗಮನಕ್ಕೆ ತರದೆ ತಮ್ಮ ನಡುವೆ ದಾವಾ ಆಸ್ತಿಯನ್ನು ಹಿಸ್ಸೆ ಮಾಡಿಕೊಂಡಿದ್ದು ಅದು ವಾದಿಗೆ ಬದ್ಧಪಡಿಸುವುದಿಲ್ಲ. ಹಿಸ್ಸೆ ಆದ ಬಳಿಕ 1ನೇ ಪ್ರತಿವಾದಿಯು ದಾವಾ ಐಟಂ ನಂ.4 ಮತ್ತು 5ನ್ನು 4ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು ಅದು ಕೂಡ ವಾದಿಗೆ ಬದ್ಧಪಡಿಸುವುದಿಲ್ಲ.

ಈ ಎಲ್ಲಾ ಕಾರಣಗಳಿಂದ ವಾದಿ ದಿನಾಂಕ 04.04.2015ರಂದು 1 ರಿಂದ 3ನೇ ಪ್ರತಿವಾದಿಯರ ನಡುವೆ ನೋಂದಾಯಿತ ಹಿಸ್ಸಾ ಪತ್ರದ ಮೂಲಕ ಆದಂತ ಹಿಸ್ಸೆ ಮತ್ತು ದಿನಾಂಕ 17.07.2015ರಂದು 1ನೇ ಪ್ರತಿವಾದಿಯು 4ನೇ ಪ್ರತಿವಾದಿಗೆ ದಾವಾ ಐಟಂ ನಂ.4 ಮತ್ತು 5ರ ಬಗ್ಗೆ ಬರೆದುಕೊಟ್ಟ ಖರೀದಿ ಪತ್ರ ಶೂನ್ಯ, ಕಾನೂನು ಬಾಹಿರ ಮತ್ತು ವಾದಿಗೆ ಬದ್ಧಪಡಿಸುವುದಿಲ್ಲ ಎಂದು ಘೋಷಿಸಬೇಕು ಮತ್ತು ವಾದಿಗೆ ದಾವಾ ಆಸ್ತಿಯ ಮೇಲೆ ಇರುವ 1/4ನೇ ಭಾಗದ ಹಿಸ್ಸೆಯನ್ನು ವಿಭಜಿಸಿ ಅದರ ಪ್ರತ್ಯೇಕ ಸ್ವಾಧೀನವನ್ನು ಕೊಡಬೇಕು ಎಂದು ಡಿಕ್ರಿ ಕೋರಿರುತ್ತಾರೆ.

1 ರಿಂದ 3ನೇ ಪ್ರತಿವಾದಿಯರು ದಾವಾದಲ್ಲಿ ಏಕಪಕ್ಷೀಯರಾಗಿರುತ್ತಾರೆ. 4ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ವಾದಿ ಮತ್ತು 1 ರಿಂದ 3ನೇ ಪ್ರತಿವಾದಿಯರ ನಡುವಿನ ಸಂಬಂಧವನ್ನು ಮತ್ತು ದಾವಾದ ಇತರ ಅಂಶಗಳನ್ನು ನಿರಾಕರಿಸಿರುತ್ತಾರೆ. 4ನೇ ಪ್ರತಿವಾದಿಯ ಪ್ರಕಾರ ದಾವಾ ಆಸ್ತಿಯು 1 ರಿಂದ 3ನೇ ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಯಾಗಿದ್ದು ದಿನಾಂಕ 04.04.2015ರ ನೊಂದಾಯಿತ ಹಿಸ್ಸಾ ಪತ್ರದ ಮೂಲಕ ಅವರು ದಾವಾ ಆಸ್ತಿಯನ್ನು ಹಿಸ್ಸೆ ಮಾಡಿಕೊಂಡಿದ್ದು ಅದರಲ್ಲಿ ದಾವಾ ಐಟಂ ನಂ.4 ಮತ್ತು 5 1ನೇ ಪ್ರತಿವಾದಿಯ ಹಿಸ್ಸೆಗೆ ಬಂದಿತ್ತು. 1ನೇ ಪ್ರತಿವಾದಿಯು ತನ್ನ ಕಾನೂನಬದ್ಧ ಅವಶ್ಯಕತೆಗಳಿಗೆ ದಾವಾ ಐಟಂ ನಂ.4 ಮತ್ತು 5ನ್ನು 4ನೇ ಪ್ರತಿವಾದಿಗೆ ದಿನಾಂಕ 17.07.2015ರ ನೋಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದರು. 4ನೇ ಪ್ರತಿವಾದಿಯು ದಾವಾ ಐಟಂ ನಂ.4 ಮತ್ತು 5ನ್ನು ಅದರ ಸೂಕ್ತ ಬೆಲೆಗೆ ಖರೀದಿಸಿ ಲಾಭದಾಯಕ ಖರೀದಿದಾರನಾಗಿರುತ್ತಾನೆ. ಖರೀದಿಯ ಬಳಿಕ 4ನೇ ಪ್ರತಿವಾದಿ ದೊಡ್ಡ ಮೊತ್ತವನ್ನು ವಿನಿಯೋಗಿಸಿ ಖರೀದಿಸಿದ ಆಸ್ತಿಯನ್ನು ಕೃಷಿಯೇತರ ಜಮೀನಾಗಿ ಪರಿವರ್ತಿಸಿದ್ದರು. ವಾದಿಗೆ ಯಾವುದೇ ಹಿಸ್ಸೆ ಇದ್ದಲ್ಲಿ ಅದನ್ನು ದಾವಾ ಐಟಂ ನಂ.1 ರಿಂದ 3ರಲ್ಲಿ ಆಕೆಗೆ ಕೊಡಬಹುದು. ಪ್ರತಿವಾದಿ 1 ರಿಂದ 3 ಇವರ ಕೆಲವು ಒಟ್ಟು ಕುಟುಂಬಕ್ಕೆ ಇನ್ನು ಕೆಲವು ಆಸ್ತಿಗಳು ಇದ್ದು ಅವುಗಳನ್ನು ಈ ದಾವಾದಲ್ಲಿ ಸೇರಿಸಿರುವುದಿಲ್ಲ. ಈ ದಾವಾ ಅವಶ್ಯಕ ಪಕ್ಷಗಾರರನ್ನು ಸೇರಿಸದ ಬಾಧೆಗೆ ಒಳಪಟ್ಟಿದೆ. ಈ ದಾವಾವನ್ನು ಸರಿಯಾಗಿ ಮೌಲ್ಯಮಾಪನ ಮಾಡಿಲ್ಲ ಮತ್ತು ಸೂಕ್ತವಾದ ನ್ಯಾಯಾಲಯದ ಶುಲ್ಕವನ್ನು ವಾದ ಪತ್ರದೊಂದಿಗೆ ಪಾವತಿ ಮಾಡಿರುವುದಿಲ್ಲ. ಈ ನ್ಯಾಯಾಲಯಕ್ಕೆ ಈ ದಾವಾವನ್ನು ವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿ ಇರುವುದಿಲ್ಲ. ಈ ದಾವಾವನ್ನು ಕಾಲಮಿತಿಯೊಳಗೆ ಸಲ್ಲಿಸಿರುವುದಿಲ್ಲ. ಈ ಎಲ್ಲಾ

ಕಾರಣಗಳಿಂದ 4ನೇ ಪ್ರತಿವಾದಿಯು ಈ ದಾವವನ್ನು ಖರ್ಚು ಸಹಿತ ವಜಾ ಮಾಡಲು ಕೇಳಿಕೊಂಡಿರುತ್ತಾರೆ.

**3. Translate the following passage as extracted from a Judgment to Kannada language:** **15 Marks**

ಈ ಕೆಳಕಂಡ ತೀರ್ಪಿನ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ. 15 ಅಂಕಗಳು

It is a well settled proposition of law that the Court cannot add words to a statute or read words which are not therein. Even if there is a defect or omission in the statute, the Court cannot correct the defect or supply the omission. Therefore, Section 38 of the Karnataka Court-Fees and Suit Valuation Act, 1958 (In short, Act) when it uses the words '*value of the subject matter of the suit*' it is the subject matter of the instrument i.e., the consideration mentioned in the instrument which is to be taken into consideration while valuing the suit for the purpose of Court fee under Section 38 of the Act and not the market value of the property.

In so far as the argument that Section 38 has to be read with Section 7 of the Act is concerned, it has no substance because the opening words of Section 7 of the Act starts with a caveat '*save as otherwise provided*'. It makes it clear that Section 7 comes into play only in the absence of a special provision provided under the Act. When the statute provides for valuing the property for the purpose of Court fee, Section 7 of the Act has no application. Secondly, Section 7 is attracted only where the court fee payable under the

Act depends on the market value of any property. In other words, if the court fee is not payable on the basis of market value, Section 7 of the Act has no application.

**4. Translate the following passage as extracted from a deposition to English language:** **15 Marks**

**ಈ ಕೆಳಕಂಡ ಸಾಕ್ಷಿ ಹೇಳಿಕೆಯ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ:** **15 ಅಂಕಗಳು**

ದಾವಾ ಸ್ವತ್ತಿನ ಪೂರ್ವಕ್ಕೆ ಸೈಟ್ ನಂ.9 ಇದೆ ಎಂದು ನಾನು ಹೇಳುವ ಬಗ್ಗೆ ಅದಕ್ಕೆ ಯಾವುದೇ ಆಧಾರಗಳು ಇರುವುದಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಇರುವ ಆಸ್ತಿಯ ಮಾಲೀಕರನ್ನು ವಿಚಾರಿಸಿ ಅವರ ಸೈಟ್ ನಂ. ಏನು ಎಂದು ನಾನು ತಿಳಿದುಕೊಂಡಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಇರುವ ಆಸ್ತಿ ಸೈಟು ನಂ.9 ಅಥವಾ ಬೇರೆ ಯಾವುದೇ ಎಂದು ನಾನು ತಿಳಿದು ಕೊಂಡಿಲ್ಲ. ಈ ದಾವಾ ಸಲ್ಲಿಸಿದ ನಂತರ ಕೂಡ ನಾನು ದಾವಾ ಸ್ವತ್ತಿನ ಪೂರ್ವ ದಿಕ್ಕಿನ ಸೈಟಿನ ಮಾಲೀಕರನ್ನು ವಿಚಾರಿಸಿ ಅವರ ಸೈಟ್ ನಂ. ಏನು ಎಂದು ತಿಳಿದುಕೊಂಡಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಇರುವ ಸೈಟ್‌ನಲ್ಲಿ ಮನೆ ಇದೆ ಎನ್ನುವುದು ನಿಜ. ದಾವಾ ಸ್ವತ್ತಿನ ಪೂರ್ವಕ್ಕೆ ಸೈಟು ನಂ.5 ಇದೆ ಎನ್ನುವುದು ನಿಜವಲ್ಲ. ನನ್ನ ಮೂಲ ಖರೀದಿ ಪತ್ರ ಸ್ಟಾಂಪ್ ಶುಲ್ಕ ಕಡಿಮೆ ಆಗಿದೆ ಎನ್ನುವ ಕಾರಣಕ್ಕಾಗಿ ನೊಂದಣಾಧಿಕಾರಿಗಳ ಬಳಿ ಇದೆ ಎಂದರೆ ಸಾಕ್ಷಿ ಅದನ್ನು ಈಗ ನಾನು ಬಿಡಿಸಿಕೊಂಡಿದ್ದೇನೆ ಎನ್ನುತ್ತಾರೆ. ಯಾವ ತಾರೀಖಿನಿಂದ ಯಾವ ತಾರೀಖಿನವರೆಗೆ ನನ್ನ ಮೂಲ ಖರೀದಿ ಪತ್ರ ನೊಂದಣಾಧಿಕಾರಿಗಳ ಬಳಿ ಇತ್ತು ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ಮೂಲ ಖರೀದಿ ಪತ್ರವನ್ನು ನಾನು ಯಾವಾಗ ಬಿಡಿಸಿಕೊಂಡಿದ್ದೇನೆ ಎನ್ನುವ ಬಗ್ಗೆ ನನ್ನ ಬಳಿ ದಾಖಲಾತಿಗಳು ಇವೆ. ಆ ದಾಖಲೆಯನ್ನು ನನಗೆ ಈ ನ್ಯಾಯಾಲಯದ ಮುಂದೆ ಹಾಜರುಪಡಿಸಬಹುದು. ನನ್ನ ಮೂಲ ಖರೀದಿ ಪತ್ರ ಕೆಂಗೇರಿ ಸಬ್‌ರಿಜಿಸ್ಟರ್ ಕಚೇರಿಯಲ್ಲಿ ನೊಂದಣಿಯಾಗಿದ್ದು ಆ ಬಳಿಕ ನಾನು ಬೇರೆಯವರಿಂದ ನಿಗದಿತ ಸ್ಟಾಂಪ್ ಶುಲ್ಕವನ್ನು ಕಟ್ಟಿಸಿ ಮೂಲ ಖರೀದಿ ಪತ್ರವನ್ನು ಬಿಡಿಸಿಕೊಂಡಿದ್ದೆ. ಸ್ಟಾಂಪ್ ಶುಲ್ಕ ಕಡಿಮೆಯ ಬಗ್ಗೆ ವಿವಾದ ಯಾರ ಮುಂದೆ ಹೋಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಖರೀದಿ ಪತ್ರದ ಮೇಲೆ ಮೊದಲು ಎಷ್ಟು ಸ್ಟಾಂಪ್ ಶುಲ್ಕ ಪಾವತಿ ಮಾಡಲಾಗಿತ್ತು ಮತ್ತು ಆ ಬಳಿಕ ಎಷ್ಟು ಪಾವತಿ ಮಾಡಲಾಗಿದೆ ಎನ್ನುವುದ ನನಗೆ ನೆನಪಿಲ್ಲ. ಹೆಚ್ಚುವರಿ ಸ್ಟಾಂಪ್ ಶುಲ್ಕವನ್ನು ಕಟ್ಟಿರುವ ರಶೀದಿ ಈಗ ನನ್ನ ಬಳಿ ಇದೆಯೇ ಎಂದು ನಾನು ಪರಿಶೀಲಿಸಿ ಹೇಳಬೇಕಾಗುತ್ತದೆ. ಕಡಿಮೆ ಸ್ಟಾಂಪ್ ಶುಲ್ಕ ವಿಚಾರದಲ್ಲಿ ನಡೆದ ಪ್ರಕರಣದ ನಂ. ಮತ್ತು ಅದು ತೀರ್ಮಾನವಾದ ತಾರೀಖು ನನಗೆ ನೆನಪಿಲ್ಲ.

5. Which specific provisions of law have to be invoked to claim the following relief: **2 x 5 = 10 Marks**

a. To add the necessary party to the suit as a defendant.

b. To set aside the exparte decree passed against the defendant.

c. To strike out a wrongly framed issue.

d. To stay the execution of an appealable decree by the Court which passed the decree.

e. To set aside the sale of immovable property in execution of a decree on the ground of irregularity or fraud.

ಈ ಕೆಳಗಿನ ಪರಿಹಾರವನ್ನು ಪಡೆಯಲು ನಿಖರವಾಗಿ ಯಾವ ಕಾನೂನಿನ ನಿಯಮಗಳನ್ನು ಉಲ್ಲೇಖಿಸಬೇಕು: **2 x 5 = 10 ಅಂಕಗಳು**

ಎ) ಅಗತ್ಯ ಪಕ್ಷಗಾರರನ್ನು ಪ್ರತಿವಾದಿಯಾಗಿ ದಾವಾಗೆ ಸೇರಿಸಲು.

ಬಿ) ಪ್ರತಿವಾದಿಯ ವಿರುದ್ಧ ಆಗಿರುವ ಏಕಪಕ್ಷೀಯ ಡಿಕ್ರಿಯನ್ನು ರದ್ದು ಪಡಿಸಲು.

ಸಿ) ತಪ್ಪಾಗಿ ರಚಿತವಾಗಿರುವ ವಿವಾದಾಂಶವನ್ನು ಒಡೆದು ಹಾಕಲು.

ಡಿ) ಡಿಕ್ರಿಯನ್ನು ಮಾಡಿದ ನ್ಯಾಯಾಲಯವೇ ಅಪೀಲಿಯ ಡಿಕ್ರಿಯ ಅಮಲ್ಜಾರಿಯನ್ನು ತಡೆಹಿಡಿಯಲು.

ಇ) ಕ್ರಮದೋಷದ ಅಥವಾ ಮೋಸದ ಆಧಾರದ ಮೇಲೆ ಡಿಕ್ರಿಯ ಅಮಲ್ಜಾರಿಯಲ್ಲಿ ಆದ ಸ್ಥಿರ ಸ್ವತ್ತಿನ ಮಾರಾಟವನ್ನು ರದ್ದುಗೊಳಿಸಲು.

6. State the grounds for granting a decree for divorce under Section 13 of the Hindu Marriage Act, 1955. **10 Marks**

ಹಿಂದು ವಿವಾಹ ಕಾಯಿದೆ 1955ರ, ಕಲಂ 13ರ ಅಡಿಯಲ್ಲಿ ಯಾವ ಕಾರಣಗಳಿಗೋಸ್ಕರ ವಿವಾಹ ವಿಚ್ಛೇದನ ಡಿಕ್ರಿಯನ್ನು ಮಂಜೂರು ಮಾಡಬಹುದು ಎಂದು ತಿಳಿಸಿ. **10 ಅಂಕಗಳು**

7. Define a Will. How is a Will to be proved? Whether a Will executed by a Hindu requires a probate? **10 Marks**

ಮೃತ್ಯ ಪತ್ರವನ್ನು ವ್ಯಾಖ್ಯಾನಿಸಿ. ಮೃತ್ಯ ಪತ್ರವನ್ನು ಹೇಗೆ ರುಜುವಾತು ಪಡಿಸಬಹುದು? ಓರ್ವ ಹಿಂದು ಬರೆದಿರುವ ಮೃತ್ಯ ಪತ್ರಕ್ಕೆ ಪ್ರೊಬೇಟ್ ಅವಶ್ಯಕತೆ ಇದೆಯೇ? **10 ಅಂಕಗಳು**

8. Discuss the various types of transfer of property as contemplated under the Transfer of Property Act, 1882. **10 Marks**

ಸ್ವತ್ತು ವರ್ಗಾವಣೆ ಅಧಿನಿಯಮ, 1882ರ ಅಡಿಯಲ್ಲಿ ಪರಿಗಣಿಸಿದ ವಿವಿಧ ಮಾದರಿಯ ಆಸ್ತಿ ವರ್ಗಾವಣೆಗಳನ್ನು ಚರ್ಚಿಸಿ. **10 ಅಂಕಗಳು**

**9.** As per the Code of Civil Procedure, 1908, under what circumstances could additional evidence be permitted by the Appellate Court and if permitted, what is the further procedure to be followed? **10 Marks**

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಪ್ರಕಾರ ಮೇಲ್ಮನವಿ ನ್ಯಾಯಾಲಯವು ಯಾವ ಸಂದರ್ಭದಲ್ಲಿ ಹೆಚ್ಚುವರಿ ಸಾಕ್ಷ್ಯವನ್ನು ನೀಡಲು ಪರವಾನಿಗೆ ನೀಡಬಹುದು ಮತ್ತು ಪರವಾನಿಗೆ ನೀಡಿದಲ್ಲಿ ಯಾವ ಮುಂದಿನ ಕ್ರಮ ತೆಗೆದುಕೊಳ್ಳಬೇಕು? **10 ಅಂಕಗಳು**

**10.** Explain the Mode of Executing **ANY TWO** of the following decrees: **5 x 2 =10 Marks**

a) Decree for Payment of Money.

b) Decree for Specific Movable Property.

c) Decree for Specific Performance of Contract.

ಈ ಕೆಳಗಿನ ಪೈಕಿ **ಯಾವುದಾದರು ಎರಡು** ಡಿಕ್ರಿಗಳನ್ನು ಅಮಲ್ಜಾರಿ ಮಾಡುವ ವಿಧಾನಗಳನ್ನು ವಿವರಿಸಿ: **5 x 2 =10 ಅಂಕಗಳು**

ಎ) ಹಣ ಸಂದಾಯಕ್ಕಾಗಿ ಡಿಕ್ರಿ.

ಬಿ) ನಿರ್ದಿಷ್ಟ ಚರಸ್ವತ್ತಿಗಾಗಿ ಡಿಕ್ರಿ.

ಸಿ) ಕರಾರುಗಳ ನಿರ್ದಿಷ್ಟ ಪಾಲನೆಗಾಗಿ ಡಿಕ್ರಿ.

**11.** Briefly state the legal principles involved in **ANY FOUR** of the following decisions: **2 ½ X 4 = 10 Marks**

a) S.R.Bommai Vs. Union of India
AIR 1994 SC 1918

b) Vishakha and others Vs. State of Rajasthan
AIR 1997 SC 3011

c) Justice K.S.Puttaswamy(Rtd.) and others Vs. Union of India
W.P.(Civil) No.494/2012, 2017 10 SCC 1

d) Salem Advocates Bar Association Vs. Union of India
(2005) 6 SCC 344

e) Prakash and others Vs. Phulavathi and others
(2016) 2 SCC 36

f) Simplex Infrastructure Limited Vs. Union of India
(2019) 2 SCC 455

ಈ ಕೆಳಗಿನ ಪೈಕಿ **ಯಾವುದಾದರು ನಾಲ್ಕು** ತೀರ್ಪಿನಲ್ಲಿ ಒಳಗೊಂಡಿರುವ ಕಾನೂನು ತತ್ವಗಳನ್ನು ಸಂಕ್ಷಿಪ್ತವಾಗಿ ತಿಳಿಸಿ: **2½ X 4 = 10 ಅಂಕಗಳು**

ಎ) ಎಸ್.ಆರ್.ಬೊಮ್ಮಾಯಿ ವಿರುದ್ಧ ಯೂನಿಯನ್ ಆಫ್ ಇಂಡಿಯ
ಏಐಆರ್ 1994 ಎಸ್‌ಸಿ 1918

ಬಿ) ವಿಶಾಖ ಮತ್ತು ಇತರರು ವಿರುದ್ಧ ರಾಜಸ್ಥಾನ ರಾಜ್ಯ
ಏಐಆರ್ 1997 ಎಸ್‌ಸಿ 3011

ಸಿ) ಜಸ್ಟೀಸ್ ಕೆ.ಎಸ್.ಪುಟ್ಟಸ್ವಾಮಿ (ನಿವೃತ್ತ) ಮತ್ತು ಇತರರು ವಿರುದ್ಧ
ಯೂನಿಯನ್ ಆಫ್ ಇಂಡಿಯ
ಡಬ್ಲ್ಯೂ.ಪಿ.(ಸಿವಿಲ್)ನಂ.494/2012, (2017) 10 ಎಸ್‌ಸಿಸಿ 1

ಡಿ) ಸೇಲಂ ಅಡ್ವೋಕೇಟ್ಸ್ ಬಾರ್ ಅಸೋಷಿಯೇಶನ್ ವಿರುದ್ಧ ಯೂನಿಯನ್ ಆಫ್ ಇಂಡಿಯ
(2005) 6 ಎಸ್‌ಸಿಸಿ 344

ಇ) ಪ್ರಕಾಶ್ ಮತ್ತು ಇತರರು ವಿರುದ್ಧ ಫುಲವತಿ ಮತ್ತು ಇತರರು
(2016) 2 ಎಸ್‌ಸಿಸಿ 36

ಎಫ್) ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ವಿರುದ್ಧ ಯೂನಿಯನ್ ಆಫ್ ಇಂಡಿಯ
(2019) 2 ಎಸ್‌ಸಿಸಿ 455

**12.** Write short notes on **ANY TWO** of the following: **2x5=10 Marks**

a) Privileged Communication under the Indian Evidence Act, 1872

b) Caveat Emptor.

c) Directive Principles of State policy.

ಈ ಕೆಳಗಿನ ಪೈಕಿ **ಯಾವುದಾದರು ಎರಡು** ವಿಷಯಗಳ ಮೇಲೆ ಟಿಪ್ಪಣಿ ಬರೆಯಿರಿ: **2x5=10 ಅಂಕಗಳು**

ಎ) ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ ಅಡಿಯಲ್ಲಿ ವಿಶೇಷ ಹಕ್ಕುಳ್ಳ ಸಂವಹನ.

ಬಿ) ಕೇವಿಯಟ್ ಎಮ್‌ಟರ್.

ಸಿ) ರಾಜ್ಯ ನೀತಿ ನಿರ್ದೇಶನ ತತ್ವಗಳು.

********